**ಸಾಕ್ಷಿಯು ದಿಃ 23.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 3ನೇ ಪ್ರತಿವಾದಿ ಪರ ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಆದರೆ ಸಹಿ ಮಾಡಲು ಬರುತ್ತದೆ. ನನ್ನ ಅಣ್ಣ ಮತ್ತು ತಂದೆ ನಮಗೆ ಗೊತ್ತಿಲ್ಲದ ಹಾಗೆ ಜಮೀನನ್ನು ಮಾರಿದ್ದಾರೆ, ಹಾಗಾಗಿ ನನಗೂ ಜಮೀನು ಬರಬೇಕೆಂದು ಈ ದಾವೆ ದಾಖಲಿಸಿದ್ದೇನೆ. ನಾನು 1987ನೇ ಇಸವಿಯಲ್ಲಿ ಜನಿಸಿರುತ್ತೇನೆ, ತಿಂಗಳು ಮತ್ತು ದಿನ ನನಗೆ ಗೊತ್ತಿಲ್ಲ. ದಾವ ಆಸ್ತಿಯ ಸರ್ವೇ ನಂಬರ್ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ, ನಾನು ವಿದ್ಯಾಭ್ಯಾಸ ಮಾಡಿಲ್ಲ. ದಾವ ಆಸ್ತಿಯನ್ನು ಹೊರತುಪಡಿಸಿ ಬೇರೆ ಪಿತ್ರಾರ್ಜಿತ ಆಸ್ತಿಗಳು ಇವೆಯಾ ಎಂದರೆ ಸಾಕ್ಷಿಯು ಇದ್ದವು ಅವುಗಳನ್ನು ನಾನು ಸೇರಿ ಮಾರಾಟ ಮಾಡಿದ್ದೇವೆ, ಅವುಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು

ಸುಮಾರು 8 ವರ್ಷಗಳ ಹಿಂದೆ ನಮ್ಮ ತಂದೆ ಮೃತಪಟ್ಟ ನಂತರ ಅವರು ಮಾಡಿದ್ದ ಸಾಲವನ್ನು ತಿರಿಸಲು ಮಾರಾಟ ಮಾಡಿರುತ್ತೇವೆ. ನನ್ನ ತಂದೆ ಮೃತಪಟ್ಟು 8 ವರ್ಷಗಳಾಗಿರುತ್ತವೆ.

2. ಸಾಕ್ಷಿಗೆ ಸರ್ವೇ ನಂಬರ್ 75/2ರ ಪಹಣಿಯನ್ನು ತೋರಿಸಿ ಈ ಪಹಣಿಯಂತೆ 1 ಮತ್ತು 2ನೇ ಪ್ರತಿವಾದಿ ಹಾಗೂ ನಿಮ್ಮ ಹೆಸರಿನಲ್ಲಿ ಜಂಟಿಯಾಗಿ 13 ಗುಂಟೆ ಆಸ್ತಿ ಖಾತೆ ಈಗಲೂ ಇರುವುದಾಗಿ ನಮೂದಿದೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 1 ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಸರ್ವೇ ನಂಬರ್ 76/3ರ ಪಹಣಿಯನ್ನು ತೋರಿಸಿ ಈ ಪಹಣಿಯಂತೆ 1 ಮತ್ತು 2ನೇ ಪ್ರತಿವಾದಿ ಹಾಗೂ ನಿಮ್ಮ ಹೆಸರಿನಲ್ಲಿ ಜಂಟಿಯಾಗಿ 18 ಗುಂಟೆ ಆಸ್ತಿ ಖಾತೆ ಈಗಲೂ ಇರುವುದಾಗಿ ನಮೂದಿದೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 2 ಎಂದು ಗುರ್ತಿಸಲಾಯಿತು. ಸಾಕ್ಷಿ ಮುಂದುವರೆದು ನಮ್ಮ ಜಮೀನುಗಳನ್ನು ಮಾರಾಟ ಮಾಡಿದ್ದು, ಕೇವಲ 5 ಗುಂಟೆ ನಮ್ಮ ಹೆಸರಿನಲ್ಲಿ ಇರುವುದನ್ನು ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ಸರ್ವೇ ನಂಬರ್ 26/6 ರ ಪಹಣಿಯನ್ನು ತೋರಿಸಿ ಈ ಪಹಣಿಯಂತೆ ನಿಮ್ಮ ತಂದೆ ಬಸವಲಿಂಗಪ್ಪ ಅಲಿಯಾಸ್ ಕರಿಯಪ್ಪ ಬಿನ್ ಲೇಟ್ ಗುರಪ್ಪ ರವರ ಹೆಸರಿನಲ್ಲಿ 5 ಗುಂಟೆ ಆಸ್ತಿ ಇದೆ ಎಂದು ತೋರಿಸಲಾಗಿ ಸಾಕ್ಷಿಯು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 3 ಎಂದು ಗುರ್ತಿಸಲಾಯಿತು.

3. ದಾವ ಆಸ್ತಿಯನ್ನು ದಿನಾಂಕ 14.03.2005 ರಂದು ನನ್ನ ತಂದೆಯು 3ನೇ ಪ್ರತಿವಾದಿಯ ತಂದೆ ಲೇ. ಮಹದೇವಪ್ಪ ರವರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಇತ್ತೀಚೆಗೆ ನನಗೆ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವಾದ ಕಾಲಕ್ಕೆ ನನಗೆ 16 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು ಇಲ್ಲ ನನಗೆ 18 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮೃತಪಟ್ಟಾಗ ಪೌತಿ ಖಾತೆ ಮಾಡಿಸಿಕೊಳ್ಳಲು ದಾವ ಆಸ್ತಿಯ ದಾಖಲೆಗಳನ್ನು ಪರಿಶೀಲಿಸಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು 2005ನೇ ಇಸವಿಯಲ್ಲಿ ಮದುವೆಯಾಗಿರುತ್ತೇನೆ. ದಾವ ಆಸ್ತಿಯಲ್ಲಿ ಈಗ 3ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಊರಿನಲ್ಲಿ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 3ನೇ ಪ್ರತಿವಾದಿಯ ತಂದೆ ಮೃತಪಟ್ಟ ನಂತರ 3ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಸಧಸ್ಯರು ದಾವ ಆಸ್ತಿಯನ್ನು ವಿಭಾಗ ಪತ್ರದ ಮೂಲಕ

ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ತಂದೆಗೆ ಆಗಿರುವ ಕ್ರಯಪತ್ರವನ್ನು ನಾನು ಇತ್ತೀಚೆಗೆ ತೆಗೆಸಿದಾಗ ನೋಡಿದ್ದೇನೆ. ಈ ದಾವ ದಾಖಲಿಸುವ ಸಮಯದಲ್ಲಿ ಸದರಿ ಕ್ರಯಪತ್ರ ತೆಗೆಸಿದ್ದು, ಆಗ ನೋಡಿದ್ದೇನೆ.

4. ನಾನು ಅಪ್ರಾಪ್ತ ವಯಸ್ಕಳಾಗಿದ್ದಾಗ ನನ್ನ ತಂದೆ ಮತ್ತು ನನ್ನ ಸಹೋದರ 1ನೇ ಪ್ರತಿವಾದಿ ನಮ್ಮ ವಿದ್ಯಾಭ್ಯಾಸಕ್ಕಾಗಿ, ಪಾಲನೆ ಮತ್ತು ಪೋಷಣೆಗಾಗಿ ಹಾಗೂ ಕುಟುಂಬದ ಅಭೀವೃದ್ದಿಗಾಗಿ ದಾವ ಆಸ್ತಿಯನ್ನು 3ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವು ನನಗೆ 2005 ರಲ್ಲಿಯೇ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಮನೆ ಮತ್ತು ಜಮೀನುಗಳು ಇದ್ದರೂ ಸಹ ದಾವ ಆಸ್ತಿಯ ಮೇಲೆ ಹಣದ ಆಸೆಯಿಂದ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯಪತ್ರವಾದ 19 ವರ್ಷಗಳ ನಂತರ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಮೇಲೆ ನನಗಾಗಲಿ, 1 ಮತ್ತು 2ನೇ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಡಿ 1 ರಿಂದ 3 ದಾಖಲೆಗಳಲ್ಲಿ ನಮೂದಿಸಿರುವ ಆಸ್ತಿಗಳಲ್ಲಿ ಹಾಗೂ ಮನೆಯಲ್ಲಿ ಮಾತ್ರ ನನಗೆ ಭಾಗಾಂಶದ ಹಕ್ಕು ಇದ್ದು ದಾವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ